ಕರ್ನಾಟಕ ಸರಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನ ಹಡಗಲಿ

ಉಪಸ್ಥಿತರು:- ವೆಂಕನಗೌಡ ಆರ್ ಪಾಟೀಲ್, ತಹಶೀಲ್ದಾರರು ಹೂವಿನ ಹಡಗಲಿ

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| ಆದ್ರಳ್ಳಿ ಈಶಪ್ಪ ತಂದೆ ಆದ್ರಳ್ಳಿ ಹಾಲಪ್ಪ, ಮಿರಾಕೋರನಹಳ್ಳಿ | ಟಿ ಕೋಟೆಪ್ಪ ತಂದೆ ಲೇಟ್ ಕೋಟ್ರಪ್ಪ, ಮಿರಾಕೋರನಹಳ್ಳಿ |

ದಾವಾ ಜಮೀನಿನ ವಿವರ

| ಗ್ರಾಮ | ಸರ್ವೇ ನಂಬರ | ವಿಸ್ತೀರ್ಣ(ಎಕರೆ.ಸೆಂಟ್ಸ್) |
|---|---|---|
| ನಾಗ್ತಿಬಸಾಪುರ | 16 A (ಇತರೆ) | 2.16 |

ಪಿಠೀಕೆ

ಮೇಲಿನ ದಾವಾ ಜಮೀನನ್ನು ವಾದಿಯಾದ ಶ್ರೀ ಆದ್ರಳ್ಳಿ ಈಶಪ್ಪ ತಂದೆ ಆದ್ರಳ್ಳಿ ಹಾಲಪ್ಪ, ಮಿರಾಕೋರನಹಳ್ಳಿ ಇವರು ನೊಂದಾಯಿತ ವಿಲ್ ನಾಮ ದಸ್ತಾವೇಜು ಸಂಖ್ಯೆ 27/2004-05 ದಿನಾಂಕ 15/03/2005 ರ ಪ್ರಕಾರ ನೊಂದಣಿಯಾಗದ್ದು ಆದ್ರಳ್ಳಿ ಹಾಲಪ್ಪ ತಂದೆ ಲೇಟ್ ರಾಮಪ್ಪ ಇವರಿಂದ ನೊಂದಣಿಮಾಡಿಸಿಕೊಂಡಿದ್ದು, ಸದರಿಯವರು 28/02/2011 ರಂದು ಮೃತಹೊಂದಿದ್ದು, ನಾಗತಿಬಸಾಪುರ ಗ್ರಾಮದ ಸರ್ವೆ ನಂಬರ್ 16A (ವಿ) 2.10, 19 C (ವಿ) 1.13, 19 D/1 (ವಿ) 0.34 27/1/11 (ವಿ) 0.24, 27/1/11 (ವಿ) 0.30, 70 (ವಿ) 1.68, 74 C (ವಿ) 1.09 ತಮ್ಮ ಹೆಸರಿಗೆ ನೊಂದಾಯಿತ ವಿಲ್ ನಾಮ ದಸ್ತಾವೇಜು ಪ್ರಕಾರ ಹಕ್ಕು ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 128 ರನ್ವಯ ಅರ್ಜಿದಾರರ ಕೋರಿಕೆ ಮೇರೆಗೆ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ ಗ್ರಾಮದಲ್ಲಿ ಗ್ರಾಮಲೆಕ್ಕಾಧಿಕಾರಗಳು ನಿಗಧಿತ ಅವಧಿಯೊಳಗೆ ನಮೂನೆ-21ನ್ನು ಜಾರಿಮಾಡಿರುತ್ತಾರೆ. ನಿಗಧಿತ ಅವದಿಯೋಳಗೆ ಅಂದರೆ ದಿನಾಂಕ 25/05/2015 ರಂದು ಪ್ರತಿವಾದಿಯಾದ ಶ್ರೀ ಟಿ ಕೋಟೆಪ್ಪ ತಂದೆ ಲೇಟ್ ಕೋಟ್ರಪ್ಪ, ಮಿರಾಕೋರನಹಳ್ಳಿ ಇವರು ದಾವಾದ ಜಮೀನಿನಲ್ಲಿ ತಮ್ಮ ಹಕ್ಕು ಇರುವುದಾಗಿ ತಿಳಿಸಿ ಹಕ್ಕು ಬದಲಾವಣೆ ಪ್ರಕರಣ ಸಂಖ್ಯೆ 109/2014-2015 ಕ್ಕೆ ತಕರಾರು ಅರ್ಜಿ ಸಲ್ಲಿಸಿರುತ್ತಾರೆ.

ಮೇಲಿನ ದಾವಾ ಜಮೀನಿನ ಹಕ್ಕು ಬದಲಾವಣೆಗೆ ತಮ್ಮ ಆಕ್ಷೇಪಣೆ ಇರುವುದಾಗಿ ಪ್ರತಿವಾದಿಗಳು ಆಕ್ಷೇಪಣಾ ಅರ್ಜಿ ಸಲ್ಲಿಸಿದ ಕಾರಣ ಈ ಪ್ರಕರಣವನ್ನು ವಿವಾದದಾಸ್ಪದವೆಂದು ಕಂದಾಯ ಪರಿವೀಕ್ಷಕರು ಹಡಗಲಿ ಇವರು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿ ಪ್ರಕರಣವನ್ನು ವಿವಾದಿತವೆಂದು ಪರಿಗಣಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ ಕಾಲಂ 129ರ ಪ್ರಕಾರ ಪ್ರತಿವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ ವಿಚಾರಣೆಯನ್ನು ದಿನಾಂಕ 25/05/2016 ರಂದು ಪ್ರಾರಂಭಿಸಲಾಗಿ ದಿನಾಂಕ 06/10/2016ರ ವರೆಗೆ ವಿಚಾರಣೆ ನಡೆಸಲಾಗಿದೆ.

ವಿಚಾರಣೆ ವೇಳೆ ವಾದಿ-ಪ್ರತಿವಾದಿಗಳು ಹಾಜರಿದ್ದು ಹೇಳಿಕೆ ನೀಡಿರುತ್ತಾರೆ. ಅಂತೆಯೇ ದಿನಾಂಕ 06/10/2016 ರಂದು ನಡೆದ ವಿಚಾರಣೆ ವೇಳೆ ವಾದಿ-ಪ್ರತಿವಾದಿಗಳು ಹಾಜರಿದ್ದು, ಪ್ರತಿವಾದಿಯು ತಾವು ನೀಡಿದ ತಕರಾರು

ಅರ್ಜಿ ಹಿಂದಕ್ಕೆ ಪಡೆದಿದ್ದು, ವಾದಿ-ಪ್ರತಿವಾದಿಗಳು ಸಲ್ಲಿಸಿರುವ ಪಾಲುಪಟ್ಟಿಯಂತೆ ಹಕ್ಕು ಬದಲಾವಣೆ ಮಾಡಲು ತಮ್ಮ ಯಾವುದೆ ಆಕ್ಷೇಪಣೆ ಇರುವುದಿಲ್ಲವೆಂದು ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ವಾದಿ-ಪ್ರತಿವಾದಿಗಳು ವಾದವನ್ನು ಆಲಿಸಲಾಗಿ ನೊಂದಾಯಿತ ವಿಲ್ ಪ್ರಕಾರ ಹಕ್ಕುಬದಲಾವಣೆ ರದ್ದು ಪಡಿಸಿ, ತಾವುಗಳು ಮಾಡಿಕೊಂಡ ಪಾಲುವಿಭಾಗ ಪ್ರಕಾರ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿದ್ದು, ಸದರಿಯವರು ಸಲ್ಲಿಸಿರುವ ಪಾಲುವಿಭಾಗ ಪತ್ರ ನೊಂದಣಿಯಾಗಿರುವುದಿಲ್ಲ ಕಾರಣ ಈ ಕೆಳಕಂಡಂತೆ ಆದೇಶ

**ಸಂ/ಕಂ/ಪಹಣಿ /ವಿವಾದ/05/2015-16** **ದಿನಾಂಕ:-20/10/2016**

**ಆದೇಶ**

ಪಿರೀಕೆಯಲ್ಲಿ ವಿವರಿಸಿದ ಹಿನ್ನೆಲೆ, ಸಂದರ್ಭ, ಕಾರಣಗಳಿಂದಾಗಿ ನಾಗತಿಬಸಾಪುರ ಗ್ರಾಮದ ಸರ್ವೆ ನಂಬರ್ 16A (ವಿ) 2.10, 19 C (ವಿ) 1.13, 19 D/1 (ವಿ) 0.34 27/1/11 (ವಿ) 0.24, 27/1/11 (ವಿ) 0.30, 70 (ವಿ) 1.68, 74 C (ವಿ) 1.09 ಎಕರೆ ಜಮೀನಿನಲ್ಲಿ ಸಲ್ಲಿಸಿರುವ ವಿಲ್ ಪ್ರಕಾರ ಹಕ್ಕು ಬದಲಾವಣೆ ಅರ್ಜಿಯನ್ನು ವಜಾಗೊಳಿಸಿದ್ದು ವಾದಿ-ಪ್ರತಿವಾದಿಗಳು ಭಾಧಿತರಾದಲ್ಲಿ ಸಿವಿಲ್ ನ್ಯಾಯಾಲಯದ ಅರ್ಜಿ ಸಲ್ಲಿಸಿ ತಮ್ಮ ಹಕ್ಕು ಪಡೆಯಲು ಸೂಚಿಸುತ್ತಾ ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:- 20/10/2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ತಹಶೀಲ್ದಾರರು
ಹೂವಿನಹಡಗಲಿ

ಪ್ರತಿಯನ್ನು:-

1)ವಾದಿ/ಪ್ರತಿವಾದಿಗಳಿಗೆ ಹಾಗೂ ಅವರ ಪರ ವಕೀಲರಿಗೆ
2)ಗಣಕೀರಣ ಕೇಂದ್ರ ಶಾಖೆ ಶಿರಸ್ತೇದಾರರು ತಾಲೂಕ ಕಛೇರಿ ಹಡಗಲಿ ಇವರಿಗೆ
3)ಕಂದಾಯ ನೀರಿಕ್ಷಕರು ಹಡಗಲಿ ಇವರಿಗೆ
4)ಹೆಚ್ಚಿನ ಪ್ರತಿ ಕಛೇರಿ ಕಡತಕ್ಕೆ